ಉ) ಹಾಗಿದ್ದರೆ, ಈ ಕಛೇರಿಯ ಅಂತಹ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಿ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಬಡ 53 ಮಂದಿ ದಿನಗೂಲಿ ನೌಕರರನ್ನು ಪುನರ್ ನೇಮಕಾತಿ ಮಾಡಿ ಅನುಕೂಲ ಮಾಡಿಕೊಡುವುದು ಯಾವಾಗ;

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :

ಅ) ಈ 53 ಜನ ದಿನಗೂಲಿ ನೌಕರರ ಬಗ್ಗೆ ಗೌ: ಸರ್ವೋಚ್ಚ ನ್ಯಾಯಾಲಯವು ಯಾವ ಆದೇಶವನ್ನೂ ನೀಡಿರುವುದಿಲ್ಲ. ಆದರೆ ದಿನಾಂಕ 1.7.84ರ ಹಿಂದೆ ನೇಮಕಗೊಂಡ ದಿನಗೂಲಿ ನೌಕರರ ಸೇವೆಯನ್ನು ಸಕ್ರಮ ಗೊಳಿಸುವ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಹೊರಡಿಸಲಾಗಿರುವ ಸರ್ಕಾರದ ಆದೇಶ ದಿನಾಂಕ 6.8.90ರ ಆದೇಶದನ್ವಯ ಈ 53 ಜನ ದಿನಗೂಲಿ ನೌಕರರು ಪುನರ್ ನೇಮಕಾತಿಗೆ ಅರ್ಹರಿರುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಸರ್ಕಾರದ ದಿನಾಂಕ: 6.8.90ರ ಆದೇಶವು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ.

ಈ) ಸದರಿ ವಿಷಯದ ಬಗ್ಗೆ ತನಿಖೆ ಪ್ರಗತಿಯಲ್ಲಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ಅಂಗವಿಕಲರಿಗೆ ಸರ್ಕಾರದಲ್ಲಿರುವ ಸೌಲಭ್ಯಗಳು

1648 (2131) ಶ್ರೀ ಚೌಡರೆಡ್ಡಿ (ಚಿಂತಾಮಣಿ) - ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಅಂಗವಿಕಲರಿಗೆ ಸರ್ಕಾರದಿಂದ ನೀಡುವ ಸೌಲಭ್ಯಗಳು ಯಾವುವು? ಚಿಂತಾಮಣಿ ತಾಲ್ಲೂಕಿನಲ್ಲಿ ಈ ಸೌಲಭ್ಯಗಳನ್ನು ಪಡೆಯಲು ಎಷ್ಟು ಅರ್ಜಿಗಳು ಬಂದಿರುತ್ತದೆ.

ಆ) ಅದರಲ್ಲಿ ಎಷ್ಟು ಜನರಿಗೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಇ) ಉಳಿದವರಿಗೆ ಯಾವಾಗ ಸೌಲಭ್ಯ ಕಲ್ಪಿಸಲಾಗುವುದು ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಅಂಗವಿಕಲರಿಗೆ ಸರ್ಕಾರದಿಂದ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಪುನರ್ವಸತಿ, ಸಾಮಾಜಿಕ ಭದ್ರತೆ ಯೋಜನೆ ಮತ್ತು ಇತರೆ ಯೋಜನೆಗಳ ಮೂಲಕ ಸೌಲಭ್ಯಗಳನ್ನು ಒದಗಿಸಲಾಗಿದೆ. ಇಲಾಖೆಯಿಂದ ನೀಡುವ ಸೌಲಭ್ಯಗಳ ವಿವರವನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ಈ ಕೆಳಗಿನ ಯೋಜನೆಯಡಿ ಚಿಂತಾಮಣಿ ತಾಲ್ಲೂಕಿನಲ್ಲಿ 770 ಅರ್ಜಿಗಳು ಬಂದಿರುತ್ತದೆ.

1.	ಆಧಾರ ಯೋಜನೆ	19
2.	ಅಂಗವಿಕಲರಿಗಾಗಿ ವಿದ್ಯಾರ್ಥಿವೇತನ	30
3.	ಗುರುತಿನ ಚೀಟಿ ವಿತರಣಾ ಯೋಜನೆ	302
4.	ಉಚಿತ ಬಸ್ ಪಾಸ್ ಯೋಜನೆ	398
5.	ಎನ್.ಹೆಚ್.ಎಫ್.ಡಿ.ಸಿ ಸಾಲ ಯೋಜನೆ	07
6.	ತ್ರಿಚಕ್ರ ವಾಹನ ಯೋಜನೆ	10

7. ಟೆಲಿಫೋನ್ ಬೂತ್ ವಿತರಣಾ ಯೋಜನೆ 01
8. ಶ್ರವಣ ಸಾಧನ ಯೋಜನೆ 03
ಒಟ್ಟು 770

ಅ) 332 ಜನರಿಗೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಇ) ಉಳಿದವರಿಗೆ ಆದಷ್ಟು ಬೇಗ ಸಂಪನ್ಮೂಲದ ಲಭ್ಯತೆಗಳಿಗನುಗುಣವಾಗಿ ನಿಯಮಗಳನ್ನು ಅನುಸರಿಸಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಅನುಬಂದ

ಅಂಗವಿಕಲರಿಗೆ ಸರ್ಕಾರವು ಒದಗಿಸುತ್ತಿರುವ ಸೌಲಭ್ಯಗಳು:

1. ಶೈಕ್ಷಣಿಕ:
   1. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಅಂಧ ಮತ್ತು ಕಿವುಡು ಮಕ್ಕಳಿಗೆ ಉಚಿತ ಊಟ, ವಸತಿ ಹಾಗೂ ಪುಸ್ತಕಗಳನ್ನು ಒದಗಿಸಲಾಗುವುದು.
   2. ರಾಜ್ಯ : ಕೇಂದ್ರ ಸರ್ಕಾರದ ಅನುದಾನ ಪಡೆದು ಅಂಗವಿಕಲ ಮಕ್ಕಳಿಗಾಗಿ ನಡೆಸುತ್ತಿರುವ ವಿಶೇಷ ವಸತಿ ಶಾಲೆಗಳಲ್ಲಿನ ಮಕ್ಕಳಿಗೆ ಉಚಿತ ಊಟ, ವಸತಿ ಪಠ್ಯ ಪುಸ್ತಕಗಳನ್ನು ಒದಗಿಸುವುದು.
   3. ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
   4. ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು.
2. ಉದ್ಯೋಗ ಮತ್ತು ತರಬೇತಿ :
   1. ಸಿ ಮತ್ತು ಡಿ ದರ್ಜೆ ಸರ್ಕಾರಿ ಹುದ್ದೆಗಳಲ್ಲಿ ಶೇ. 5 ರಷ್ಟು ಮೀಸಲಾತಿ
   2. ಸ್ವಯಂ ಉದ್ಯೋಗಕ್ಕಾಗಿ (ಆಧಾರ ಯೋಜನೆ)
   3. ದೂರವಾಣಿ ಬೂತ್‌ಗಳನ್ನು ಒದಗಿಸುವ ಯೋಜನೆ
   4. ಎನ್.ಹೆಚ್.ಎಫ್.ಡಿ.ಸಿ. ಮೂಲಕ ಸಾಲ ಸೌಲಭ್ಯ.
3. ಪುನರ್ವಸತಿ ಯೋಜನೆಗಳು:
   1. ಸಾಧನ ಸಲಕರಣೆಗಳ ಪೂರೈಕೆ
   2. ಸಮುದಾಯ ಆಧಾರಿತ ಪುನರ್ವಸತಿ ಯೋಜನೆ
   3. ವೈದ್ಯಕೀಯ ಪರಿಹಾರ ನಿಧಿ ಯೋಜನೆ
4. ಸಾಮಾಜಿಕ ಭದ್ರತಾ ಯೋಜನೆ:
   1. ಅಂಗವಿಕಲರಿಗೆ ಮಾಸಿಕ 125 ರೂ.ಗಳ ಮಾಸಾಶನ ಸೌಲಭ್ಯ
   2. ಬುದ್ದಿ ಮಾಂದ್ಯ ವ್ಯಕ್ತಿಗಳ ಪಾಲಕರಿಗೆ ವಿಮಾ ಯೋಜನೆ
5. ಇತರೆ ಯೋಜನೆಗಳು:
   1. ನಿರ್ಗತಿಕ ಅಬಲ: ವೃದ್ದ ಬುದ್ದಿಮಾಂದ್ಯ ಹಾಗೂ ಅಂಗವಿಕಲ ಫಲಾನುಭವಿಗಳಿಗೆ ವಸತಿಯುತ ಸೌಲಭ್ಯವನ್ನು ಸಮಾಜ ಸೇವಾ ಸಂಕೀರ್ಣದಲ್ಲಿ ಒದಗಿಸಲಾಗಿದೆ.
   2. ಸಾಧನೆ ಹಾಗೂ ಪ್ರತಿಭೆಗೆ ಪ್ರೋತ್ಸಾಹ ಯೋಜನೆ.